# ಫೋನ್‌ನಲ್ಲಿ ಫೋಟೋಗ್ರಫಿ

■ **ಯು.ಬಿ.ಪವನಜ**




ಈಶ್ವರ

ಇಂದು ಕ್ಯಾಮರಾ ಇಲ್ಲದ ಸ್ಮಾರ್ಟ್‌ಫೋನ್‌ಗಳೇ ಇಲ್ಲ. ಕೆಲವು ದುಬಾರಿ ಸ್ಮಾರ್ಟ್‌ಫೋನ್‌ಗಳನ್ನಂತೂ ಫೋನ್ ಎನ್ನುವ ಬದಲು 'ಉಚಿತ ಫೋನ್ ಸೌಲಭ್ಯವಿರುವ ಉತ್ತಮ ಕ್ಯಾಮರಾ' ಎನ್ನಬಹುದು. ಅಂದರೆ ಅವು ಫೋನ್‌ಗಳಿಗಿಂತ ಹೆಚ್ಚಾಗಿ ಕ್ಯಾಮರಾಗಳಾಗಿಯೇ ಕೆಲಸ ಮಾಡುತ್ತವೆ.

ಉತ್ತಮ ಫೋಟೋ ತೆಗೆಯಲು ಸಹಾಯ ಮಾಡುವ ಕಿರುತಂತ್ರಾಂಶಗಳೂ ಇದರಲ್ಲಿವೆ. ಕ್ಯಾಮರಾ ಬಳಸಿ 'ಸ್ವಂತೀ' ತೆಗೆದುಕೊಳ್ಳುವುದಕ್ಕೂ ಸೂಕ್ತ ಕಿರುತಂತ್ರಾಂಶಗಳಿವೆ. ಅವು ಕ್ಲಿಕ್ ಮಾಡಿದ ಬಳಿಕ ಸುಮಾರು ಐದು ಸೆಕೆಂಡಿನ ನಂತರ ಫೋಟೋ ತೆಗೆಯುತ್ತವೆ ಅಥವಾ ಮುಗುಳ್ನಗು ಬೀರಿದಾಗ ಮಾತ್ರ ಫೋಟೋ ತೆಗೆಯುತ್ತವೆ!

ಫೋಟೋ ತೆಗೆದ ನಂತರ ಅವನ್ನು ಸಂಸ್ಕರಿಸಲು, ಕಪ್ಪು ಬಿಳುಪಾಗಿ ಮಾರ್ಪಡಿಸಲು, ಕತ್ತರಿಸಲು, ಹಲವು ನಮೂನೆಗಳಲ್ಲಿ ಬದಲಾವಣೆ ಮಾಡಲು ಗಣಕಗಳಲ್ಲಿ ತಂತ್ರಾಂಶಗಳು ಇರುವುದು ಈಗ ಸಾಮಾನ್ಯ. ಈಗ ಇನ್ನಷ್ಟು ಆ್ಯಪ್‌ಗಳು ಸ್ಮಾರ್ಟ್‌ಫೋನ್‌ಗಳಲ್ಲಿ ಲಭ್ಯವಾಗುತ್ತಿವೆ. ಇಲ್ಲಿವೆ ಕೆಲವು ಉಪಯುಕ್ತ ಕಿರುತಂತ್ರಾಂಶಗಳ ಪಟ್ಟಿ. ನಿಮಗೆ ಬೇಕಾದದ್ದನ್ನು ಬಳಸಿ, ಬೇಕಾದಂತೆ ಫೋಟೋಗಳ ಜತೆಗೆ ಆಟ ಆಡಬಹುದು.

1. ಕ್ಯಾಮರಾ 360 (Camera360 Ultimate): ಇದು ಸ್ಮಾರ್ಟ್‌ಫೋನ್ ಕ್ಯಾಮರಾವನ್ನು ಒಂದು ಮಟ್ಟಿಗೆ ವೃತ್ತಿನಿರತ ಕ್ಯಾಮರಾದ ಹತ್ತಿರಕ್ಕೆ ತರುತ್ತದೆ. ಇದರಲ್ಲಿ ಹಲವು ನಮೂನೆಯ ಆಯ್ಕೆಗಳಿವೆ. ಹಲವು ದೃಶ್ಯಗಳ ಆಯ್ಕೆಗಳಿವೆ. ತೆಗೆದ ಫೋಟೋವನ್ನು ಹಲವು ರೀತಿಯಲ್ಲಿ ಬದಲಾಯಿಸಬಹುದು. ಫೋಟೋದ ಜೊತೆ ಧ್ವನಿ ರೆಕಾರ್ಡ್ ಮಾಡಿಕೊಳ್ಳಬಹುದು.

2. ಪನಾರೊಮ ಕ್ಯಾಮರಾ (Panorama Camera 360): ಎಡದಿಂದ ಬಲಕ್ಕೆ (ಅಥವಾ ಬಲದಿಂದ ಎಡಕ್ಕೆ) ಕ್ಯಾಮರಾವನ್ನು ತಿರುಗಿಸುತ್ತ ಹಲವು ಫೋಟೋಗಳನ್ನು ತೆಗೆದು, ಅವುಗಳನ್ನು ಎಚ್ಚರಿಕೆಯಿಂದ ಫೋಟೋಶಾಪ್‌ನಲ್ಲಿ ಜೋಡಿಸಿದಾಗ ಅದನ್ನು ಪನಾರೊಮ ಫೋಟೋ ಎನ್ನುತ್ತಾರೆ. ಈ 'ಆ್ಯಪ್'-ಅನ್ನು ನಿಮ್ಮ ಫೋನ್ ಕ್ಯಾಮರಾದಲ್ಲಿ ಬಳಸಿ ನೀವು ಪನಾರೊಮ ಫೋಟೋ ತೆಗೆಯಬಹುದು. ಹಲವು ಫೋಟೋಗಳನ್ನು ತೆಗೆದು ಫೋಟೋಶಾಪ್‌ನಲ್ಲಿ ಅವುಗಳನ್ನು ಜೋಡಿಸುತ್ತ ಕಸರತ್ತು ಮಾಡಬೇಕಾಗಿಲ್ಲ.

3. ಫಾಸ್ಟ್ ಬರ್ಸ್ಟ್ ಕ್ಯಾಮರಾ ಲೈಟ್ (Fast Burst Camera Lite): ಕ್ರೀಡೆ ಅಥವಾ ವೇಗವಾಗಿ ಬದಲಾಗುತ್ತಿರುವ ಘಟನೆಯ ಬಗ್ಗೆ ಅಷ್ಟೇ ವೇಗವಾಗಿ ಹಲವು ಫೋಟೋಗಳನ್ನು ತೆಗೆಯುವುದನ್ನು ಬರ್ಸ್ಟ್ ಫೋಟೋಗ್ರಾಫಿ ಎನ್ನುತ್ತಾರೆ. ಈ ಆ್ಯಪ್ ಅದನ್ನು ಮಾಡಲು ಸಹಾಯ ಮಾಡುತ್ತದೆ.

4. ಮೋಶನ್ ಕ್ಯಾಮರಾ (Motion Camera): ಯಾವುದಾದರೂ ವಸ್ತು, ಪ್ರಾಣಿ ಅಥವಾ ವ್ಯಕ್ತಿ ಚಲಿಸುತ್ತಿರುವಾಗ ಕ್ಯಾಮರಾವನ್ನು ಅಲುಗಾಡದೆ ಹಿಡಿದುಕೊಂಡು (ಸ್ಟ್ಯಾಂಡ್ ಬಳಸಿದರೆ ಒಳ್ಳೆಯದು) ನಿಧಾನ ಷಟ್ಟರ್ ವೇಗದಲ್ಲಿ ಫೋಟೋ ತೆಗೆದರೆ, ಅದರಲ್ಲಿ ಹಿನ್ನೆಲೆ ಚಲನೆಯಲ್ಲಿಲ್ಲದ ವಸ್ತು ಮಾತ್ರ ಚಲನೆಯಲ್ಲಿದ್ದಂತೆ ಕಂಡುಬರುತ್ತದೆ. ಇಂತಹ ಛಾಯಾಗ್ರಹಣಕ್ಕೆ 'ಮೋಶನ್ ಬ್ಲರ್ ಫೋಟೋಗ್ರಫಿ' ಎನ್ನುತ್ತಾರೆ. ನಿಮ್ಮ ಆಂಡ್ರೋಯಿಡ್ ಸ್ಮಾರ್ಟ್‌ಫೋನ್‌ನ ಕ್ಯಾಮರಾ ಬಳಸಿ ಇಂತಹ ಛಾಯಾಗ್ರಹಣ ಮಾಡಬೇಕಿದ್ದರೆ ನೀವು ಈ ಆ್ಯಪ್ ಬಳಸಬಹುದು.

5. ಎಚ್‌ಡಿಆರ್ ಕ್ಯಾಮರಾ (HDR Camera): ಒಂದು ದೃಶ್ಯದ ಹಲವು ಭಾಗಗಳಲ್ಲಿ ಬೆಳಕು ಹಲವು ಸ್ಥರಗಳಲ್ಲಿದ್ದರೆ ಅಂತಹ ದೃಶ್ಯಗಳ ಫೋಟೋ ತೆಗೆಯಬೇಕಾದರೆ ಎಚ್‌ಡಿಆರ್ (HDR – High Dynamic Range) ಫೋಟೋಗ್ರಫಿ ಸಹಾಯಕ್ಕೆ ಬರುತ್ತದೆ. ಈ ಕಿರುತಂತ್ರಾಂಶವು ನಿಮ್ಮ ಆಂಡ್ರೋಯಿಡ್ ಕ್ಯಾಮರಾ ಬಳಸಿ ಎಚ್‌ಡಿಆರ್ ಫೋಟೋಗ್ರಫಿ ಮಾಡಲು ಸಹಾಯ ಮಾಡುತ್ತದೆ. ಇತ್ತೀಚೆಗೆ ಹಲವು ಸ್ಮಾರ್ಟ್‌ಫೋನ್‌ಗಳ ಕ್ಯಾಮರಾ ತಂತ್ರಾಂಶಗಳಲ್ಲಿ ಈ ಸೌಲಭ್ಯ ನೀಡಿದ್ದಾರೆ.

6. ಪಿಕ್ಸ್‌ಆರ್ಟ್ ಫೋಟೋ ಸ್ಟುಡಿಯೋ (PicsArt Photo Studio): ಹೊಸದಾಗಿ ಚಿತ್ರ ರಚಿಸುವ, ಚಿತ್ರಗಳನ್ನು ಸಂಪಾದಿಸುವ, ಫೋಟೋಗಳನ್ನು ತಿದ್ದುಪಡಿ ಮಾಡುವ, ಫೋಟೋಗಳ ಮೇಲೆ ಚಿತ್ರ ಬರೆಯುವ, ಪಠ್ಯ ಸೇರಿಸುವ ಕೆಲಸಗಳನ್ನು ಮಾಡಬಲ್ಲ ಕಿರುತಂತ್ರಾಂಶವಿದು. ನಿಮ್ಮ ಸೃಜನಶೀಲತೆಗೆ ತಕ್ಕಂತೆ ಈ ಆ್ಯಪ್ ಮೂಲಕ ಅಪರೂಪದ ದೃಶ್ಯಗಳನ್ನು ಸೃಷ್ಟಿ ಮಾಡಬಹುದು.

ಪ್ಲೇ ಸ್ಟೋರಿನಲ್ಲಿ ಹುಡುಕಿದರೆ ಫೋಟೋಗಳನ್ನು ಜೋಡಿಸುವ, ಕೊಲಾಜ್ ಮಾಡುವ, ತೆಗೆದ ಫೋಟೋಕ್ಕೆ ವ್ಯಕ್ತಿಯ ತಲೆಯ ಜಾಗದಲ್ಲಿ ಪ್ರಾಣಿಗಳ ತಲೆಯನ್ನು ಜೋಡಿಸುವ, ಹೆಂಗಸರಿಗಾಗಿ ವಿನ್ಯಾಸದ ಸೀರೆಗಳನ್ನು ಜೋಡಿಸಿ ತೋರಿಸುವ– ಹೀಗೆ ನೂರಾರು ಕಿರುತಂತ್ರಾಂಶಗಳು ದೊರೆಯುತ್ತವೆ. ಈ ಆ್ಯಪ್‌ಗಳ ಮೂಲಕ ಫೋಟೋಗ್ರಫಿಯಲ್ಲಿ ಬೇಕಾದಂತೆ ಸಾಧನೆಗಳನ್ನು ಮಾಡಬಹುದು. ●

### ಮೊಬೈಲ್ ಫ್ಯೂಶನ್ ಆ್ಯಪ್

ಮೈಕ್ರೊಸಾಫ್ಟ್ ಕಂಪೆನಿ ಮೊಬೈಲ್ ಕ್ಯಾಮರಾ ತಂತ್ರಜ್ಞಾನದಲ್ಲಿ ಇನ್ನೊಂದು ಹೆಜ್ಜೆಯನ್ನಿಟ್ಟಿದೆ. ಅದು ಸಿದ್ಧಮಾಡಿರುವ ಮೊಬೈಲ್ ಫ್ಯೂಶನ್ ಕಿರುತಂತ್ರಾಂಶವು ಎದುರಿನ ಚಿತ್ರವೊಂದರ ಥ್ರೀ-ಡಿ ಬಿಂಬವನ್ನು ಸ್ಕ್ಯಾನ್ ಮಾಡಿ ಸಾದರಪಡಿಸುತ್ತದೆ. ಈ ಆ್ಯಪ್ ಉಪಯೋಗಿಸಿ ಸಾಧಾರಣ ಸ್ಮಾರ್ಟ್‌ಫೋನ್‌ಅನ್ನೂ ಹೈಟೆಕ್ ಥ್ರೀ-ಡಿ ಸ್ಕ್ಯಾನರ್ ಆಗಿ ಉಪಯೋಗಿಸಬಹುದು. ವ್ಯಕ್ತಿಯ ಅಥವಾ ಯಾವುದೇ ಕಟ್ಟಡದ ಎದುರಿಗೆ ನಿಂತು ನಿಮ್ಮ ಮೊಬೈಲ್‌ನಲ್ಲಿ ಫೋಟೋ ಕ್ಲಿಕ್ಕಿಸಿದರೆ ಸಾಕು, ಅದನ್ನು ಎಂಟೂ ದಿಕ್ಕುಗಳಿಂದ ತೋರಿಸುವ ಚಿತ್ರ ಮೊಬೈಲ್‌ನಲ್ಲಿ ಕಾಣಿಸುತ್ತದೆ. ಗೆಳೆಯರಿಗೆ ಈ ಥ್ರೀ-ಡಿ ಫೋಟೋವನ್ನು ಕಳುಹಿಸಬಹುದು. ಕ್ಷಣಾರ್ಧದಲ್ಲಿ ಥ್ರೀ-ಡಿ ಪ್ರಿಂಟ್ ಮಾಡಬಹುದು. ಈ ಕಿರು ತಂತ್ರಾಂಶದ ಮಾರುಕಟ್ಟೆ ಬಿಡುಗಡೆ ಇನ್ನೂ ಆಗಿಲ್ಲ.